**ಓ ಎಸ್ ನಂಃ 799/2014**

**ಪಿ. ಡಬ್ಲ್ಯೂ ಃ 2**

**ದಿಃ 06-09-2022 ರಂದು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್.ಜಿ.ಆರ್ ವಕೀಲರಿಂದ ಃ**

ದಾವೆಯನ್ನು ಲಕ್ಷ್ಮಿ ನರಸಿಂಹಯ್ಯ ಇವರು ಚನ್ನಮ್ಮ ಮತ್ತು ಬೇರೆಯವರ ಮೇಲೆ ಹಾಕಿದ್ದಾರೆ. ಏನು ಪರಿಹಾರ ಕೇಳಿ ದಾವೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಯಾರ ವಿರುದ್ದ ದಾವೆ ಮಾಡಿದ್ದಾರೆ ಎಂದು ವಿವರವಾಗಿ ಗೊತ್ತಿಲ್ಲ. ದಾವೆಯನ್ನು ಸ.ನಂ. 46 ಕ್ಕಾಗಿ ಹಾಕಿದ್ದಾರೆ. ವಾದಿಯ ತಾತ ದೊಡ್ಡರಾಮಯ್ಯ ಇವರನ್ನು ನಾನು ನೋಡಿದ್ದೇನೆ. ಅವರ ಹೆಂಡತಿಯ ಹೆಸರು ರೇವಮ್ಮ ಎಂದರೆ ಗೊತ್ತಿಲ್ಲ. ಅವರಿಗೆ ರೇವಣ್ಣ ಮತ್ತು ಮಂಡಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ರೇವಣ್ಣ ಇವರಿಗೆ ಲಕ್ಷ್ಮೀನರಸಿಂಹಯ್ಯ ಇವರು ಒಬ್ಬನೇ ಮಗ ಎಂದರೆ ಸರಿ. ಮಂಡಯ್ಯ ನ ಹೆಂಡತಿಯ ಹೆಸರು ಗಂಗಮ್ಮ ಎಂದರೆ ಸರಿ. ಮಂಡಯ್ಯ ರೇವಣ್ಣನ ತಮ್ಮ ಇರುತ್ತಾರೆ. ಅವರಿಗೆ 4 ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ಸರಿ.

ಕುಟುಂಬದ ಯಜಮಾನಿಕೆಯನ್ನು ರೇವಣ್ಣ ನವರು ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಮಂಡಯ್ಯ ಮತ್ತು ರೇವಣ್ಣ ಇವರು ಒಟ್ಟು ಕುಟುಂಬದಲ್ಲಿದ್ದು ಆಸ್ತಿಯನ್ನು ಅನುಭವಿಸಿಕೊಂಡು ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ. ನನಗೆ ಬುದ್ದಿ ಬಂದಾಗಿನಿಂದ ಅವರಿಬ್ಬರು ಒಟ್ಟು ಕುಟುಂಬದಲ್ಲಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನಗೆ 20 ನೇ ವಯಸ್ಸಿಗೆ ಬಂದಾಗ ಬುದ್ದಿ ಬಂದಿರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕ ಃ 9.4.1957 ರ ನಿ ಪಿ 17 ರ ಪ್ರಕಾರ ದಾವಾ ಸ್ವತ್ತನ್ನು ರೇವಣ್ಣ ಮತ್ತು ಮಂಡಯ್ಯ ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ರೇವಣ್ಣ ಕ್ರಯಕ್ಕೆ ತೆಗೆದುಕೊಂಡಿರುವುದು ಗೊತ್ತು ಎಂದು ಹೇಳುತ್ತಾರೆ. ಆ ಜಮೀನಿನ ವ್ಯವಹಾರಕ್ಕೆ ನಾನು ಸೇರಿರಲಿಲ್ಲ. ಅದಕ್ಕೆ ನಮ್ಮ ತಂದೆ ಬೈರಪ್ಪ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ರೇವಣ್ಣ ಮತ್ತು ಮಂಡಯ್ಯ ಇವರ ಜೀವಿತಾವಧಿಯವರೆಗೆ ಅವರಿಬ್ಬರು ಜಂಟಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ರೇವಣ್ಣ ಮತ್ತು ಮಕ್ಕಳು ಸ್ವಾಧೀನದಲ್ಲಿದ್ದದ್ದುದ್ದನ್ನು ನಾನು ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕ ಃ 30.05.1962 ರಲ್ಲಿ ದಾವಾ ಸ್ವತ್ತನ್ನು ರೇವಣ್ಣ ಮತ್ತು ಮಂಡಯ್ಯ ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಪ್ರಕಾರ ದಾವಾ ಸ್ವತ್ತಿನ ಪೂರ್ವದ 3 ಎಕರೆ 36 ಗುಂಟೆ ಮಂಡಯ್ಯನಿಗೆ, ಪಶ್ಚಿಮದ 3 ಎಕರೆ ಜಮೀನು ರೇವಣ್ಣನಿಗೆ ಬಂದಿತ್ತು ಎಂದರೆ ನನಗೆ

ಗೊತ್ತಿಲ್ಲ. ಆ ಪ್ರಕಾರ ಅವರ ಮಕ್ಕಳುಗಳು ಈಗ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ರೇವಣ್ಣನ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ನನಗೆ ಮತ್ತು ವಾದಿಗೆ ವಿಶ್ವಾಸವಿದೆ ಎಂದರೆ ಸರಿ. ನನಗೆ ಒಟ್ಟು ಕುಟುಂಬದಲ್ಲಿದ್ದದ್ದು ಮತ್ತು ಭಾಗ ಮಾಡಿಕೊಂಡಿದ್ದು ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಹಾರಿಕೆ ಉತ್ತರ ಕೊಡುತಿತದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನಗೆ ಜಮೀನು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯನ್ನು ನಮ್ಮ ವಕೀಲರು ಹೇಳಿ ಬರೆಯಿಸಿದ್ದಾರೆ. ಸಾಕ್ಷಿ ಪುನಃ ಹೇಳುತ್ತಾರೆ ನಾನೇ ಹೇಳಿ ಬರೆಯಿಸಿದ್ದೇನೆ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇವಣ್ಣ ಮತ್ತು ಮಂಡಯ್ಯ ಇವರಿಗೆ ಪಿತ್ರಾರ್ಜಿತ ಸ್ವತ್ತುಗಳಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅವರ ಕುಟುಂಬಕ್ಕೆ ಎಷ್ಟು ಸ್ವತ್ತುಗಳಿದ್ದವು ಎಂದು ನನಗೆ ಗೊತ್ತಿಲ್ಲ. ಸುಮಾರು ಎಷ್ಟು ಕಡೆ ಅವರಿಗೆ ಜಮೀನಿದ್ದವು ಎಂದು ಗೊತ್ತಿಲ್ಲ. ಅವರಿಬ್ಬರು ಯಾವಾಗ ವಿಭಾಗ ಮಾಡಿಕೊಂಡಿದ್ದರು ಎಂದು ಗೊತ್ತಿಲ್ಲ. ಅವರಿಬ್ಬರು ವಿಭಾಗ ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಮಂಡಯ್ಯ ಯಾವ್ಯಾವ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ. ಅವರ ಕುಟುಂಬದ ಬಗ್ಗೆ ನನಗೆ ಏನು ಗೊತ್ತಿಲ್ಲ.

**ಇನ್ನೊಬ್ಬ ಸಾಕ್ಷಿದಾರ ಸಿದ್ದಗಂಗಯ್ಯ ಖಾಯಿಲೆ ಬಿದ್ದಿದ್ದಾನೆ ಆತನಿಗೆ ಬರಲು ಆಗುವುದಿಲ್ಲ.**

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**